# ಅಂಗಳಕ್ಕೆ ಬಂತು 'ಬುಗುರಿ'



ಗಣೇಶ್ ಅಭಿನಯದ ಇಪ್ಪತ್ತೈದನೇ ಸಿನಿಮಾ ಎನ್ನುವ ವಿಶೇಷಣದ 'ಬುಗುರಿ' ಆಗಸ್ಟ್ 14ರಂದು ತೆರೆ ಕಾಣುತ್ತಿದೆ. ಇದು ಗಣೇಶ್ ಅವರ ಈವರೆಗಿನ ಅತ್ಯುತ್ತಮ ಅಭಿನಯದ ಚಿತ್ರವೂ ಹೌದು ಎನ್ನುವುದು ನಿರ್ದೇಶಕ ಎಂ.ಡಿ. ಶ್ರೀಧರ್ ಅನಿಸಿಕೆ. ಚಿತ್ರ ನೋಡಿರುವ ಗೆಳೆಯರೆಲ್ಲ 'ಗಣೇಶ್ ಅಭಿನಯದ ಅತ್ಯುತ್ತಮ ಚಿತ್ರ ಇದು' ಎಂದು ಬಣ್ಣಿಸುತ್ತಿರುವುದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

ಸಿನಿಮಾದ ಬಗ್ಗೆ ವಿಶ್ವಾಸವಿದ್ದರೂ ಚಿತ್ರತಂಡವನ್ನು ಸಣ್ಣದೊಂದು ಅಳುಕು ಕಾಡುತ್ತಿದೆ. ಅದು, 'ಬುಗುರಿ' ತೆರೆಕಾಣುತ್ತಿರುವ ದಿನದಂದೇ ಉಪೇಂದ್ರ ಅವರ 'ಉಪ್ಪಿ–2' ಚಿತ್ರ ಬಿಡುಗಡೆ ಆಗುತ್ತಿರುವುದು. ಎರಡು ದೊಡ್ಡ ಬಜೆಟ್‌ನ ಕನ್ನಡ ಸಿನಿಮಾಗಳು ಪರಸ್ಪರ ಸ್ಪರ್ಧೆ ಎದುರಿಸಬೇಕಾದ ಸನ್ನಿವೇಶ. ಈ ಬಗ್ಗೆ ಶ್ರೀಧರ್ ಅವರಿಗೆ ಬೇಸರವಿದೆ. 'ಚಿತ್ರದ ಬಿಡುಗಡೆಯ ದಿನಾಂಕವನ್ನು ನಾವು ಮೂರ್ನಾಲ್ಕು ವಾರಗಳ ಮೊದಲೇ ನಿರ್ಧರಿಸಿದ್ದೆವು. ಆ ಬಗ್ಗೆ ಪ್ರಚಾರವನ್ನೂ ನಡೆಸಿದ್ದೆವು. ಈಗ ಇದ್ದಕ್ಕಿದ್ದಂತೆ ಉಪೇಂದ್ರರ ಸಿನಿಮಾ ಬಿಡುಗಡೆಯಾಗುತ್ತಿದೆ. ಇದು ಮೊದಲೇ ತಿಳಿದಿದ್ದರೆ ನಾವು ಇನ್ನೂ ಸ್ವಲ್ಪ ತಡವಾಗಿ ಬರುತ್ತಿದ್ದೆವು. ಈಗ ಕಾಲ ಮೀರಿದೆ' ಎನ್ನುತ್ತಾರೆ ಶ್ರೀಧರ್.

ಕಠಿಣ ಸ್ಪರ್ಧೆ ಇದ್ದರೂ ಒಳ್ಳೆಯ ಚಿತ್ರವನ್ನು ಪ್ರೇಕ್ಷಕರು ಕೈಬಿಡುವುದಿಲ್ಲ ಎನ್ನುವ ನಂಬಿಕೆ 'ಬುಗುರಿ' ಬಳಗದ್ದು. ಗಣೇಶ್‌ಗೆ ಜೋಡಿಯಾಗಿ ಎರಿಕಾ ಫರ್ನಾಂಡಿಸ್ ಹಾಗೂ ರೀಚಾ ಪನ್ನೈ ಅಭಿನಯಿಸಿದ್ದಾರೆ.

# ಕೂಡಿ ಕಳೆಯುವ 'ಅನಂತ' ಗಣಿತ



ಹೊಸ ಯೋಚನೆಗಳೊಂದಿಗೆ ಚಿತ್ರಕಥೆ ರಚಿಸಿಕೊಂಡು ನಿರ್ದೇಶಕರಾಗುವ ಕನಸು ಕಾಣುವ ಬಹುತೇಕ ಹುಡುಗರಿಗೆ ನೆನಪಾಗುವ ಬೆರಳೆಣಿಕೆ ಕಲಾವಿದರಲ್ಲೊಬ್ಬರು ಅನಂತನಾಗ್. ಅಸಲು ಕಸುಬುದಾರರ ಪಾಲಿಗೆ ಅನಂತನಾಗ್ ಅಕ್ಷಯಪಾತ್ರೆ ಇದ್ದಂತೆ. ಪ್ರಸ್ತುತ ಅವರು ನಟಿಸುತ್ತಿರುವ ಕೆಲವು ಪಾತ್ರಗಳನ್ನು ಗಮನಿಸಿ: ಗಡ್ಡ ವಿಜಿ ನಿರ್ದೇಶನದ 'ಪ್ಲಸ್', ಹೇಮಂತ್ ರಾವ್ ಅವರ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಹಾಗೂ ಅರ್ಜುನ್ ನಿರ್ದೇಶನದ 'ಐರಾವತ' ಸಿನಿಮಾದ ಪಾತ್ರಗಳು ಯಾವುದೇ ಕಲಾವಿದನೊಬ್ಬ ಹಂಬಲಿಸುವ ಅವಕಾಶಗಳಂತಿವೆ.

ವಿಜಿ ನಿರ್ದೇಶನದ 'ಪ್ಲಸ್' ಚಿತ್ರದ ಬಗ್ಗೆ ಅನಂತ್ ಅವರಿಗೆ ಇನ್ನಿಲ್ಲದ ಮೆಚ್ಚುಗೆ. 'ಇದೊಂದು ಸ್ವಂತಿಕೆಯ ಸಿನಿಮಾ' ಎಂದು ಬಣ್ಣಿಸುವ ಅವರು, ಪ್ರತಿಯೊಬ್ಬರ ಜೀವನದಲ್ಲೂ ಪ್ಲಸ್ ಹಾಗೂ ಮೈನಸ್‌ಗಳು ಇದ್ದು, ಅವುಗಳನ್ನು ಸಂಕೇತಿಸುವ ರೂಪಕದಂಥ ಪಾತ್ರದಲ್ಲಿ ನಟಿಸುತ್ತಿದ್ದಾರಂತೆ. ಈ ಪಾತ್ರ ಎಷ್ಟರಮಟ್ಟಿಗೆ ಅವರನ್ನು ಪರವಶಗೊಳಿಸಿದೆಯೆಂದರೆ, ಇದೇ ಮೊದಲ ಬಾರಿಗೆ ತಮಗೆ ಒಗ್ಗದ ಗಡ್ಡವನ್ನು ಪಾತ್ರಕ್ಕಾಗಿ ಒಪ್ಪಿಕೊಂಡಿದ್ದಾರೆ. ಬರಬರುತ್ತಾ ಪಾತ್ರದ ಜೊತೆಗೆ ಮೇಕಪ್ ಕೂಡ ಅವರಿಗೆ ಇಷ್ಟವಾಗಿದೆಯಂತೆ.

'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದಲ್ಲೂ ಅವರದು ಪ್ರಮುಖ ಪಾತ್ರ. ಮರೆಗುಳಿ ಹಿರಿಯ ನಾಗರಿಕನೊಬ್ಬ ತನ್ನ ಕುಟುಂಬದಿಂದ ತಪ್ಪಿಸಿಕೊಳ್ಳುವ ಕಥೆ ಈ ಚಿತ್ರದ್ದು. ಇದರ ಜೊತೆಗೆ ಪೋಷಕರು ಮತ್ತು ಮಕ್ಕಳ ನಡುವಣ ಜನರೇಷನ್ ಗ್ಯಾಪ್‌ನ ಕಥೆಯ ಚಿತ್ರವೊಂದರಲ್ಲೂ ಅವರು ನಟಿಸುತ್ತಿದ್ದಾರೆ.

ಕಮರ್ಷಿಯಲ್ ಅಂಶಗಳು ಎದ್ದು ಕಾಣಿಸುವ 'ಐರಾವತ' ಚಿತ್ರದಲ್ಲೂ ಅನಂತ್ ಅವರಿಗೆ ಪ್ರಮುಖ ಪಾತ್ರವೊಂದಿದೆ. ಈ ಚಿತ್ರದಲ್ಲಿ ಅವರದು, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರನ್ನು ಹೋಲುವ ಪಾತ್ರ. ದೊರೆಸ್ವಾಮಿ ಅವರೊಂದಿಗೆ ಸಾಕಷ್ಟು ಕಾಲ ಕಳೆಯುವ ಮೂಲಕ, ಹಿರಿಯ ಸ್ವಾತಂತ್ರ್ಯ ಹೋರಾಟಗಾರನ ಬದುಕಿನ ತಾತ್ವಿಕತೆಯನ್ನು ಅರ್ಥ ಮಾಡಿಕೊಳ್ಳಲು ಅನಂತನಾಗ್ ಪ್ರಯತ್ನಿಸಿದ್ದಾರೆ. ಸಿನಿಮಾದಲ್ಲಿನ ತಮ್ಮ ಪಾತ್ರ ಹಿರಿಯ ಗಾಂಧಿವಾದಿಗೆ ಸಲ್ಲಿಸುವ ಗೌರವದ ರೀತಿಯಲ್ಲಿ ಅವರಿಗೆ ಕಾಣಿಸಿದೆ.

■ ರಘು